"ಬೋಸುಡಿ, ಮದುವೆ ಆಗುವ ಮುಂಚೆ ಹೊಟ್ಟೆ ಬರಿಸಿಕೊಂಡು ಹಾರಾಡಿದಿಯಲ್ಲ, ಈಗ ನೋಡು ನಿನ್ನ ಅವಸ್ಥೆ ಏನಾಗಿದೆ? ನಿನಗೆ ಇನ್ನೂ ಅನುಭವಿಸಲಿಕ್ಕೆ ಉಂಟು, ಅನುಭವಿಸು, ಅನುಭವಿಸು, ಥೂ ಥೂ ಥೂ" ಎಂದು ಅಂಗಳದಲ್ಲಿ ಬೊಮ್ಮಿ ಮೈಮೇಲೆ ಬಂದವಳಂತೆ ಸಿಟ್ಟಿನಿಂದ ಬೊಬ್ಬಿರಿಯುತ್ತಾ, ಕ್ಯಾಕರಿಸಿ ಉಗುಳುತ್ತಾ, ಯಮುನಕ್ಕನ ಮನೆಯೊಳಗೆ ನೋಡುತ್ತಾ ಆರ್ಭಟಿಸುತ್ತಿದ್ದಳು. ಮಧ್ಯಾಹ್ನ ಎರಡು ಗಂಟೆಯ ಬಿರುಬಿಸಿಲಿಗೆ ಕಡುಕಪ್ಪಾಗಿದ್ದ ಅವಳ ಕುಳ್ಳ ನೆರಳು ಅವಳನ್ನೇ ಅಣಕಿಸುವಂತೆ ಗಲಗಲ ಕುಣಿದಾಡುತ್ತಿತ್ತು. ಜಾಲ ಕೊರತಿ ಎಂಬ ಹೆಣ್ಣುಭೂತದ ಕೋಲದ ಹಾಗೆ ಕಾಣಿಸುತ್ತಿತ್ತು ಆ ದೃಶ್ಯ.

ತನ್ನ ಗುಡಿಸಲಿನ ಒಳಗೆ ಅಂತರದ ನಸುಗತ್ತಲಲ್ಲಿ ಭಾವನೆಯೇ ಇಲ್ಲದೆ ಕುಳಿತಿದ್ದ ಯಮುನಕ್ಕ ಕುಳಿತಲ್ಲಿಂದಲೇ ಸ್ವಲ್ಪ ಬಾಗಿ ಬೊಮ್ಮಿಯನ್ನು ನೋಡಿದಳು. ಅವಳ ಮುಖದಲ್ಲಿದ್ದ ರೋಷದ ತೀವ್ರತೆಯನ್ನು ಕಂಡು ಆಶ್ಚರ್ಯಪಟ್ಟಳು. ಯಾಕಿಷ್ಟು ರೋಷ, ದ್ವೇಷ ಅವಳಿಗೆ ತನ್ನ ಬಗ್ಗೆ?

ನೆರೆಮನೆಯ ಬೊಮ್ಮಿ ದಿನಕ್ಕೊಮ್ಮೆ ತನ್ನ ಮನೆಯಂಗಳಕ್ಕೆ ಬಂದು ಹೀಗೆ ಅಕಾರಣವಾಗಿ ತನ್ನ ಮೇಲೆ ದ್ವೇಷ ಕಾರುತ್ತಾ, ತನ್ನ ಮರ್ಯಾದೆಯನ್ನು ಬೀದಿಪಾಲು ಮಾಡಿ ಹೋಗುವುದು ಯಮುನಕ್ಕನಿಗೆ ಇತ್ತೀಚೆಗೆ ಅಭ್ಯಾಸವಾಗಿಬಿಟ್ಟಿದೆ.

ಬೊಮ್ಮಿಗೆ ವಯಸ್ಸು ಎಪ್ಪತ್ತು ಅಂದರೆ ತನ್ನಷ್ಟೇ ಆಗಿರಬಹುದು. ಆದರೆ, ಚೆನ್ನಾಗಿ ತಿಂದು ತಿರುಗಿ ಕುದುರೆಯಂತೆ ಗಟ್ಟಿಮುಟ್ಟಾಗಿದ್ದಾಳೆ. ಆದರೆ, ತಾನು ಎಪ್ಪತ್ತು ವರ್ಷವಾಗುವ ಮುನ್ನವೇ ಬೆನ್ನು ಬಾಗಿ ನಡೆಯಲು ಕಷ್ಟಪಡುತ್ತಿದ್ದೇನೆ. ಬೊಮ್ಮಿಯನ್ನು ನೋಡುತ್ತಾ ಯಮುನಕ್ಕ ತನ್ನ ದೈನ್ಯಾವಸ್ಥೆಯ ಬಗ್ಗೆ ದುಃಖಿತಳಾದಳು. ತನ್ನ ಮನೆಯಲ್ಲಿ ಯಾರಾದರೂ ಗಂಡುದಿಕ್ಕಿದ್ದರೆ ಈ ರೀತಿ ಮಾನಸಿಕ ಹಿಂಸೆ ನೀಡುವ ಹೆಂಗಸನ್ನು ಹಿಡಿಸಿ ಜೈಲಿಗೆ ಕಳುಹಿಸುತ್ತಿದ್ದರು. ತನಗೆ ಹೇಳುವವರು ಕೇಳುವವರು ಯಾರೂ ಇಲ್ಲ. ತಾನು ಸತ್ತರೆ ಅಂತ್ಯ ಸಂಸ್ಕಾರವನ್ನಾದರೂ ಮಾಡಿಯಾರು ಎಂದು ತಾನು ನಂಬಿರುವ ನೆರೆಮನೆಯ ಅನಂತಪದ್ಮನಾಭರಾಯರ ಹೆಂಡತಿ ಪದ್ಮ ಈ ಬೊಮ್ಮಿಗೆ ಒಂದು ಬುದ್ಧಿವಾದದ ಮಾತು ಹೇಳುವುದಿಲ್ಲ. ಅವಳಿಗೂ ಕೇಳಲು ಖುಷಿಯಾಗುತ್ತಿರಬಹುದೇನೋ! ಅವಳಿಗೆ ಬೊಮ್ಮಿಯೂ ಬೇಕು, ನಾನೂ ಬೇಕು.

ಅಥವಾ ನಾನು ಯಾಕೆ ಬೇಕು ಪದ್ಮಳಿಗೆ? ನನಗೆ ಅವಳು ಬೇಕಷ್ಟೆ. ಬೊಮ್ಮಿಯಾದರೆ ಪದ್ಮಳಿಗೆ ಅನಿವಾರ್ಯ; ಹಟ್ಟಿಕೊಟ್ಟಿಗೆಗೆ ಅಡರು(ಒಣ ಗೆಲ್ಲುಗಳು), ಕೊತ್ತಳಿಗೆ, ತರಗೆಲೆ ಇತ್ಯಾದಿ ತಂದುಹಾಕುವ ಕೂಲಿ ಕೆಲಸವನ್ನು ಅವಳು ಆಗಾಗ ಮಾಡುತ್ತಿದ್ದುದರಿಂದ ಪದ್ಮಳಿಗೆ ಬೊಮ್ಮಿಯನ್ನು ದೂರಮಾಡಿಕೊಳ್ಳುವ ಮನಸ್ಸು ಇರದಿರುವುದು ಸಹಜ. ಆದರೂ ತನ್ನನ್ನು ಇಷ್ಟು ಹಿಂಸಿಸುವಾಗ ಬೊಮ್ಮಿಗೆ ಒಂದು ಬುದ್ಧಿಮಾತು ಹೇಳಬಹುದಿತ್ತು ಪದ್ಮಳಿಗೆ ಎಂದು ಯಮುನಕ್ಕ ಯೋಚಿಸುವುದುಂಟು.

ಯಮುನಕ್ಕ ಮತ್ತು ಬೊಮ್ಮಿ ಇಬ್ಬರೂ ಪದ್ಮಳ ಮನೆಗೆ ಟೀವಿ ಧಾರಾವಾಹಿಗಳನ್ನು ನೋಡಲು ಹೋಗುವವರೇ. ಬೊಮ್ಮಿ ಬೆಳಗಿನ ಹೊತ್ತು, ಸಂಜೆ ನಾಲ್ಕು ಗಂಟೆಯ ನಂತರ ಕತ್ತಲಾಗುವವರೆಗೆ ಪದ್ಮಳ ಮನೆಯಲ್ಲಿ ಟೀವಿ ನೋಡುತ್ತಾ ಇರುತ್ತಾಳೆ. ಹಾಗಾಗಿ ಯಮುನಕ್ಕ ಆ ಹೊತ್ತಿಗೆ ಹೋಗುವುದನ್ನು ನಿಲ್ಲಿಸಿದ್ದಾಳೆ. ಅವಳು ಸಂಜೆ ಏಳು ಗಂಟೆಯಿಂದ ಎಂಟುಗಂಟೆಯವರೆಗೆ ಎರಡು ಧಾರಾವಾಹಿಗಳನ್ನು ನೋಡಿ ಹಿಂದಿರುಗುತ್ತಾಳೆ. ಬೆಳಗಿನ ಹೊತ್ತು ಕೂಡಾ ಟೀವಿಯಲ್ಲಿ ಬರುವ ಸಿನಿಮಾ, ಚಿತ್ರಗೀತೆ, ಧಾರಾವಾಹಿಗಳನ್ನು ನೋಡಲು